# ನಾಯಿ ನಿಷ್ಠೆ

ಮಧ್ಯ ಕಾಲೀನ ಭಾರತದಲ್ಲಿ ದಕ್ಷಿಣದ ಗೋಲ್ಕೊಂಡ ರಾಜ್ಯ ವಜ್ರಗಳಿಗೆ ಪ್ರಸಿದ್ಧವಾಗಿತ್ತು. ವಿಶ್ವವಿಖ್ಯಾತ ಕೋಹಿನೂರ್ ವಜ್ರ ಸಿಕ್ಕಿದ್ದು ಇಲ್ಲಿನ ಗಣಿಗಳಲ್ಲೇ ಎಂಬುದು ಕೆಲ ಇತಿಹಾಸಕಾರರ ಅಭಿಪ್ರಾಯ. ಗೋಲ್ಕೊಂಡದಲ್ಲಿ ಬಹು ಅಮೂಲ್ಯ ವಜ್ರಗಳು ಯಥೇಚ್ಛವಾಗಿ ಸಿಕ್ಕುವ ಮೂರ್ನಾಲ್ಕು ದೊಡ್ಡ ದೊಡ್ಡ ಬೆಟ್ಟಗಳಿವೆ ಎಂಬ ಸುದ್ದಿ ದಿಲ್ಲಿಯ ಮೊಘಲ್ ಚಕ್ರವರ್ತಿ ಔರಂಗಜೇಬನಿಗೆ ಅವನ ಆಪ್ತ ಬೇಹುಗಾರರಿಂದ ದೊರೆತಾಗ ಅವನಿಗೆ ಅಪಾರ ಸಂತೋಷವಾಯಿತು. ಅವನು ತನ್ನ ಸೇನಾಧಿಪತಿಯೊಡನೆ ಬಹುದೊಡ್ಡ ಸೈನ್ಯವನ್ನು ಗೋಲ್ಕೊಂಡ ರಾಜ್ಯವನ್ನು ವಶಪಡಿಸಿಕೊಳ್ಳಲು ಕಳುಹಿಸಿಕೊಟ್ಟ. ಹಾಗೆಯೇ ಅಲ್ಲಿಯ ಬಹು ಅಮೂಲ್ಯ ವಜ್ರಗಳನ್ನು ಬೆಟ್ಟಗಳಿಂದ ಅಗೆದು ಲೂಟಿ ಮಾಡಿ ತನಗೆ ತಂದೊಪ್ಪಿಸಬೇಕೆಂದು ಆಜ್ಞಾಪಿಸಿದ.

ಮೊಘಲ್ ಸೈನ್ಯದ ದಾಳಿಯ ಸುದ್ದಿಯನ್ನರಿತ ಗೋಲ್ಕೊಂಡದ ನವಾಬ ಅಬುಲ್ ಹಸನ್, ನಾಲ್ಕಾರು ತಿಂಗಳಿಗಾಗುವಷ್ಟು ಆಹಾರ ಸಾಮಗ್ರಿಯನ್ನು ತನ್ನ ಕೋಟೆಯೊಳಗೆ ಶೇಖರಿಸಿಟ್ಟುಕೊಂಡು, ಕೋಟೆಯ ಹೆಬ್ಬಾಗಿಲನ್ನು ಭದ್ರಪಡಿಸಿದ. ಕೋಟೆಯ ಸುತ್ತಲೂ ಬಿಗಿಯಾದ ಪಹರೆಯನ್ನಿಟ್ಟ. ಅನಂತರ ಅವನು ಕೋಟೆಯೊಳಗೆ ಭರದಿಂದ ಯುದ್ಧದ ಸಿದ್ಧತೆಯನ್ನು ನಡೆಸತೊಡಗಿದ.

ಎರಡು ಮೂರು ತಿಂಗಳು ಕಳೆದರೂ ಗೋಲ್ಕೊಂಡದ ನವಾಬ ಶರಣಾಗದಿದ್ದುದನ್ನು ಕಂಡು ಮುತ್ತಿಗೆ ಹಾಕಿ ಕುಳಿತಿದ್ದ ಮೊಘಲ್ ಸೇನಾಧಿಪತಿಗೆ ತುಂಬಾ ನಿರಾಸೆಯಾಯಿತು. ಮುಂದೆ ಏನು ಮಾಡಬೇಕೆಂಬುದೇ ತಿಳಿಯದಾಯಿತು. ಕೊನೆಗೆ ಅವನು ತನ್ನ ಆಪ್ತ ಸಲಹೆಗಾರರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ. ಇದ್ದಕ್ಕಿದ್ದಂತೆ ಅವನಿಗೆ ಒಂದು ಯೋಚನೆ ಹೊಳೆಯಿತು. ಕೂಡಲೇ ಮುತ್ತಿಗೆಯನ್ನು ಹಿಂದಕ್ಕೆ ತೆಗೆದುಕೊಳ್ಳಲು ತನ್ನ ಸೈನ್ಯಕ್ಕೆ ಆಜ್ಞೆಯನ್ನಿತ್ತ. ಅದೇ ರೀತಿ ಮೊಘಲ್ ಸೈನ್ಯ ತನ್ನ ಬಿಡಾರವನ್ನು ಎಬ್ಬಿಸ ತೊಡಗಿತು.

ಇದನ್ನು ಕಂಡ ಗೋಲ್ಕೊಂಡದ ಸೈನಿಕರ ಆನಂದಕ್ಕೆ ಪಾರವೇ ಇಲ್ಲದಂತಾಯಿತು, ಅವರು ಮೈಮರೆತು ಆಮೋದ–ಪ್ರಮೋದಗಳಲ್ಲಿ ಮಗ್ನರಾಗಿದ್ದಾಗ, ಕೆಲವು ಮೊಘಲ್ ಸೈನಿಕರು ಹಠಾತ್ತಾಗಿ ಮಧ್ಯರಾತ್ರಿಯಲ್ಲಿ ಮೋಸದಿಂದ ಕೋಟೆಯ ಗೋಡೆಯನ್ನು ಪೂರ್ವದಿಕ್ಕಿನಿಂದ ಹತ್ತ ತೊಡಗಿದ್ದರು. ಇದನ್ನು ನೋಡಿ, ಸೈನಿಕನೊಬ್ಬ ಸಾಕಿದ್ದ ನಾಯಿ ಜೋರಾಗಿ ಬೊಗಳುತ್ತ ತನ್ನ ಒಡೆಯನನ್ನು ಎಬ್ಬಿಸಿತು. ಅವನು ಗಡಬಡಿಸಿ ಮೇಲೆದ್ದು, ಸುತ್ತಲೂ ತನ್ನ ಪಂಜಿನ ಬೆಳಕಿನಲ್ಲಿ ಕೋಟೆಯ ಗೋಡೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಾಗ, ಕೆಲವು ಮೊಘಲ್ ಸೈನಿಕರು ಪೂರ್ವದಿಕ್ಕಿನಿಂದ ಕೋಟೆ ಗೋಡೆಯನ್ನು ಏರುತ್ತಿರುವುದು ಕಾಣಿಸಿತು. ಅಪಾಯದ ಮುನ್ಸೂಚನೆಯನ್ನು ಅರಿತು ಜೋರಾಗಿ ಕೂಗಿ ತನ್ನ ಸಹ ಸೈನಿಕರನ್ನು ಎಚ್ಚರಿಸಿದ.

ಕೆಲವು ಕ್ಷಣಗಳೊಳಗಾಗಿಯೇ ಗೋಲ್ಕೊಂಡದ ಸೈನಿಕರೆಲ್ಲ ಎಚ್ಚೆತ್ತುಕೊಂಡು ತಮ್ಮ ತಮ್ಮ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡು ಹೋರಾಟಕ್ಕೆ ಸಿದ್ಧರಾದರು. ಕಳ್ಳತನದಿಂದ ಮೇಲೇರಿ ಬರುತ್ತಿದ್ದ ಮೊಘಲ್ ಸೈನಿಕರನ್ನು ನಿರ್ದಯವಾಗಿ ಕೊಚ್ಚಿ ಹಾಕಿ, ತಮ್ಮ ಕೋಟೆಯನ್ನು ಆಕ್ರಮಣದಿಂದ ಪಾರು ಮಾಡಿದರು. ಮೊಘಲ್ ಸೇನಾಧಿಪತಿಯ ಕುತಂತ್ರ ಫಲಿಸದಾಯಿತು. ಅನಾಮಧೇಯ ಸೈನಿಕನೊಬ್ಬ ಸಾಕಿದ್ದ ಆ ನಾಯಿ ತನ್ನ ಒಡೆಯ ಮೈಮರೆತಿದ್ದಾಗ ತಾನು ಮಾತ್ರ ತನ್ನ ಕರ್ತವ್ಯವನ್ನು ಅತ್ಯಂತ ನಿಷ್ಠೆಯಿಂದ ಮಾಡಿ ತನ್ನ ರಾಜ್ಯವನ್ನು ತನಗರಿಯದಂತೆಯೇ ಬಹು ದೊಡ್ಡ ಗಂಡಾಂತರದಿಂದ ಪಾರು ಮಾಡಿತ್ತು.

ಮಾರನೆಯ ದಿನ ನಡೆದ ವಿಷಯವನ್ನೆಲ್ಲಾ ತನ್ನ ಸೈನಿಕರಿಂದ ತಿಳಿದ ನವಾಬ ಅಬುಲ್ ಹಸನ್ ಆ ನಾಯಿಯನ್ನು ಅಭಿಮಾನದಿಂದ ತಬ್ಬಿಕೊಂಡು ಮುತ್ತಿನ ಮಳೆಗರೆದ! ಆ ನಾಯಿಯ ಕೊರಳಿಗೊಂದು ಬಂಗಾರದ ಪಟ್ಟಿಯನ್ನು ಹಾಕಿಸಿದ! ಅದರ ಮೇಲೆ ಆ ನಾಯಿಯ ನಿಷ್ಠೆಯನ್ನು ಸುಂದರ ಅಕ್ಷರಗಳಲ್ಲಿ ಕೆತ್ತಿಸಿದ. ಅದನ್ನು ತನ್ನ ಅರಮನೆಯಲ್ಲೇ ಇರಿಸಿಕೊಂಡ! ಆ ನಾಯಿಯ ಒಡೆಯನಾದ ಸೈನಿಕನಿಗೆ ಯಥೇಚ್ಛ ಧನ–ಕನಕಗಳನ್ನಿತ್ತ! ಇನ್ನು ಮುಂದೆ ವೈರಿ ಹತ್ತಿರವಿದ್ದಾಗ ಎಂತಹ ಸಂದರ್ಭದಲ್ಲಿಯೇ ಆಗಲಿ ಮೈಮರೆಯದಂತೆ ಸದಾ ಜಾಗರೂಕರಾಗಿರಬೇಕೆಂದೂ ಕಟುವಾಗಿ ಎಚ್ಚರಿಸಿದ.

**ಬಿ. ಪಾಂಡುರಂಗಯ್ಯ, ದಾವಣಗೆರೆ**



ಚಿತ್ರ: ಶ್ರೀಕಂಠಮೂರ್ತಿ